ದಿನಾಂಕಃ **05-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ,**

1) ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ಹೆಚ್.ಕೆ.ಸಿದ್ದೇಗೌಡ ಎಂಬುವವರು ನನ್ನ ವಿರುದ್ದ ಈ ಹಿಂದೆ ದಾವೆ ಸಲ್ಲಿಸಿದರು ಎಂದರೆ ಸರಿ. ಸದರಿ ಹೆಚ್.ಕೆ ಸಿದ್ದೇಗೌಡ ಮತ್ತು ಪ್ರತಿವಾದಿ ಬೇರೆ ಬೇರೆ ವ್ಯಕ್ತಿಗಳು ಎಂದರೆ ಸರಿ. ವಾದಿ 2 ರಿಂದ 4 ರವರು ನಮ್ಮ ಕುಟುಂಬದವರು ಎಂದರೆ ಸರಿ. ನನ್ನ ಮಗ ಮನೋಹರ್ ಈಗ ಜೀವಂತ ಇರುವುದಿಲ್ಲ. ನಾನು ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 376/15 ರಂತೆ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯನ್ನು ಹಿಂಪಡೆದಿರುತ್ತೇವೆ ಎಂದರೆ ಸರಿ. ಮನೋಹರ್ ರವರು ಈ ದಾವೆಯಲ್ಲೂ ಪಕ್ಷಗಾರರಾಗಿರುವುದಿಲ್ಲ. ಸದರಿ ವಿಷಯವನ್ನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ.

2) ತಿದ್ದುಪಡಿ ವಾದ ಪತ್ರಕ್ಕೆ ನಾನು ಮತ್ತು 4 ನೇ ವಾದಿ ಮಾತ್ರ ಸಹಿ ಮಾಡಿರುತ್ತೇವೆ ಎಂದರೆ ಸರಿ. ವಾದಿ 2 ರಿಂದ 4 ರವರು ಈ ದಾವೆಯನ್ನು ನಡೆಸಲು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಅಗತ್ಯ ಪಕ್ಷಗಾರ ಅಲ್ಲ ಎಂದರೆ ಸರಿಯಲ್ಲ. ನಿಪಿ 3 ದಾಖಲೆಯಲ್ಲಿ ವಾದಿ 2 ಮತ್ತು 3 ರವರ ಹೆಸರು ಯಾವ ಕಾರಣಕ್ಕಾಗಿ ನಮೂದು ಮಾಡಲಾಗಿದೆ ಎಂದು ಕಾರಣ ತಿಳಿಸಿಲ್ಲ ಎಂದರೆ ಸರಿಯಲ್ಲ. 1990 ನೇ ಸಾಲಿಗೆ ಸಂಬಂಧಿಸಿದ ದಾಖಲೆಗಳನ್ನು ಹೊರತುಪಡಿಸಿ ಇತರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೂಲ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3) ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯಲ್ಲಿ ಜಂಜರ್ ನಂಬರ್ ತಪ್ಪಾಗಿ ನಮೂದು ಮಾಡಿದ್ದೇವೆ ಎಂದು ತಿಳಿಸಿರುತ್ತೇವೆ ಎಂದರೆ ಸರಿ. ಈ ದಾವೆಯಲ್ಲೂ

ಸಹ ಈ ಹಿಂದೆ ಹೇಳಿದ ಜಂಜರ್ ನಂಬರನ್ನೇ ನಮೂದು ಮಾಡಿದ್ದೇವೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾದ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1950 ರಲ್ಲಿ ಸರ್ವೆ ನಂ.1 ರಲ್ಲಿ ನಾಗಪ್ಪ ರವರಿಂದ ಒಂದು ನಿವೇಶನ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದಿಃ 27-05-1970 ರಂದು ಪ್ರತಿವಾದಿ ಸಹಕಾರ ಸಂಘ ಕಾರ್ಯದರ್ಶಿಯಿಂದ ವಿಸ್ತೀರ್ಣ 60 ಇಂಟು 50 ನಿವೇಶನವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಗುಂಡಪ್ಪ ರವರ ಮಗ ನಾಗಪ್ಪ ರವರಿಂದ ಪೂರ್ವ ಪಶ್ಚಿಮ 16 ಗಜ, ಉತ್ತರ ದಕ್ಷಿಣ 24 ಗಜ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ 1950 ನೇ ಸಾಲಿನಲ್ಲಿ ಪೂರ್ವಕ್ಕೆ ಹಾಸನ ಇಲವಾಲ ರಸ್ತೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ.

4) ದಿಃ 27-05-1970 ರ ಕ್ರಯ ಪತ್ರದಲ್ಲಿ ಪೂರ್ವಕ್ಕೆ 1950 ನೇ ಸಾಲಿನಲ್ಲಿ ಖರೀದಿ ಮಾಡಿದ ಆಸ್ತಿ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳುವ ಆಸ್ತಿ ಸ್ಥಳದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಪಾವತಿ ಮಾಡಿದ ಬಗ್ಗೆ ಮತ್ತು ನನ್ನ ಹೆಸರಿಗೆ ಖಾತೆ ಅಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ